## 2021 ಕ.ತೀ.ವ 1491

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಂ.ಐ. ಅರುಣ್

# ಶ್ರೀ ಸುಭಾಸ್ –ವಿರುದ್ಧ– ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಹಿರೇಕೆರೂರು ಪೋಲೀಸ್ ಸ್ಟೇಷನ್*

ದಂಡ ಪ್ರಕ್ರಿಯಾ ಸಂಹಿತೆ ಪ್ರಕರಣ 374(2) ರಡಿಯಲ್ಲಿ ಕ್ರಿಮಿನಲ್ ಮೇಲ್ಮನವಿ.

ಭಾರತ ದಂಡ ಸಂಹಿತೆ 498–ಎ ಮತ್ತು 302ನೇ ಪ್ರಕರಣ

ಭಾರತ ದಂಡ ಸಂಹಿತೆಯ 498–ಎ ಮತ್ತು 302ನೇ ಪ್ರಕರಣದಡಿಯಲ್ಲಿ ಮೇಲ್ಮನವಿದಾರರು ಶಿಕ್ಷಾರ್ಹ ಅಪರಾಧವನ್ನೆಸಗಿರುವರೆಂದು ಮತ್ತು ಅವರನ್ನು ಶಿಕ್ಷಿಸುವಂತೆ ನೀಡಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.

ಸಾಕ್ಷ್ಯಾಧಾರಗಳನ್ನು ಮರುಪರಿಶೀಲಿಸಿದ ಉಚ್ಚ ನ್ಯಾಯಾಲಯದ ದ್ವಿ ಸದಸ್ಯ ಪೀಠವು ಮೇಲ್ಮನವಿದಾರರು ಭಾರತ ದಂಡ ಸಂಹಿತೆಯ 498–ಎ ಮತ್ತು 302ನೇ ಪ್ರಕರಣಗಳಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವರೆಂದು ಮತ್ತು ಆತನನ್ನು ಶಿಕ್ಷಿಸುವಂತೆ ಸೂಕ್ತವಾಗಿ ಅಧಿವಿಚಾರಣಾ ನ್ಯಾಯಾಲಯವು ತೀರ್ಪು ನೀಡಿದೆ ಎಂದು ಅಭಿಪ್ರಾಯಪಟ್ಟು ಸದರಿ ಮೇಲ್ಮನವಿಯನ್ನು ವಜಾಗೊಳಿಸಿದೆ.

*ಕ್ರಿಮಿನಲ್ ಅಪೀಲು ಸಂಖ್ಯೆ: 100226/2015, ದಿನಾಂಕ 11ನೇ ಮಾರ್ಚ್, 2020.

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. 2012(4) ಎಸ್‌ಸಿಸಿ 327*
*ಭಾಜ್ಜು -ವಿರುದ್ಧ- ಮಧ್ಯ ಪ್ರದೇಶ ರಾಜ್ಯ (ಉಲ್ಲೇಖ) 30*

ಅರ್ಜಿದಾರರ ಪರ : ಶ್ರೀ ಶ್ರೀನಂದ್ ಎ. ಪಚ್ಚಾಪುರೆ, ವಕೀಲರು;
ಎದುರುದಾರರ ಪರ : ಶ್ರೀ ವಿ.ಎಂ. ಬಣಕಾರ್, ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎಂ.ಐ. ಅರುಣ್:**

1. IIನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಹಾವೇರಿ ಇವರು ದಿನಾಂಕ: 02.07.2015 ರಂದು ಎಸ್.ಸಿ. ಸಂಖ್ಯೆ. 54/2012 ಮೊಕದ್ದಮೆಯಲ್ಲಿ ನೀಡಿದ ದಂಡನೆಯ ತೀರ್ಪು ಮತ್ತು ಆದೇಶದಿಂದ ಬಾಧಿತನಾದ ಇದರಲ್ಲಿನ ಅಪೀಲುದಾರ-ಆಪಾದಿತನು, ಈ ಅಪೀಲನ್ನು ಹೂಡಿದ್ದಾನೆ.

2. ಅಪೀಲುದಾರ-ಆಪಾದಿತನ ಪರ ಮಾನ್ಯ ವಕೀಲರಾದ ಶ್ರೀ ಶ್ರೀನಂದ್ ಎ. ಪಚ್ಚಾಪುರೆ ರವರ ಮತ್ತು ಎದುರುದಾರ ರಾಜ್ಯದ ಪರ ಮಾನ್ಯ ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್‌ವರಾದ ಶ್ರೀ ವಿ.ಎಂ. ಬಣಕಾರ್‌ರವರ ವಾದವನ್ನು ಆಲಿಸಲಾಗಿದೆ.

3. ಪ್ರಾಸಿಕ್ಯೂಷನ್ನಿನ ವಾದವೆಂದರೆ, ಆಪಾದಿತನು ದೂರುದಾರಳ ಪತಿ. ಅವರ ವೈವಾಹಿಕ ಜೀವನದಿಂದ, ಅವರಿಗೆ ಸುಪ್ರಿಯಾ, ಚಂದ್ರಿಕಾ ಮತ್ತು ಅಕ್ಷತಾ ಎಂಬ ಹೆಸರಿನ ಮೂವರು ಹೆಣ್ಣು ಮಕ್ಕಳು ಇದ್ದಾರೆ ಮತ್ತು 2012 ರ ವರ್ಷದಲ್ಲಿ ಅನುಕ್ರಮವಾಗಿ ಅವರಿಗೆ 5 ವರ್ಷಗಳು, 3 ವರ್ಷಗಳು ಮತ್ತು

ಒಂದು ವರ್ಷಗಳಾಗಿವೆ. ಆಪಾದಿತನು ವಿವಾಹದ ದಿನದಿಂದಲೇ ದೂರುದಾರಳ ನಡತೆಯ ಬಗ್ಗೆ ಸಂಶಯವನ್ನು ಹೊಂದಿದ್ದನು. ಅವಳು ಯಾರೇ ವ್ಯಕ್ತಿಯೊಂದಿಗೆ ಮಾತನಾಡಿದರೂ, ಆತನೊಂದಿಗೆ ಅವಳು ಸಂಬಂಧ ಹೊಂದಿದ್ದಾಳೆಂದು ಆರೋಪಿಸಿ, ಅವಳನ್ನು ಅಸಭ್ಯ ಭಾಷೆಯಲ್ಲಿ ನಿಂದಿಸುತ್ತಿದ್ದನು ಮತ್ತು ಯಾವುದೇ ಕಾರಣವಿಲ್ಲದೆ ಅವಳನ್ನು ಹೊಡೆಯುತ್ತಿದ್ದನು. ಆತನು ದೂರುದಾರಳ ಶೀಲವನ್ನು ಸಂಶಯಿಸಿ ಅವಳಿಗೆ ದೈಹಿಕ ಹಿಂಸೆ ನೀಡುತ್ತಿದ್ದನು. ಅಲ್ಲದೆ ಆತನು, ದೂರುದಾರಳನ್ನು ಮತ್ತು ಮಕ್ಕಳನ್ನು ಕೊಲೆ ಮಾಡುತ್ತೇನೆಂದು ಹೇಳಿ ಬೆದರಿಸುತ್ತಿದ್ದನು.

4. ಈ ಹಿನ್ನಲೆಯಲ್ಲಿ, ದಿನಾಂಕ: 16–03–2012 ರಂದು, ಮಧ್ಯಾಹ್ನ ಆಪಾದಿತನು ಮನೆಗೆ ಬಂದ ತರುವಾಯ ಮೇಲೆ ಹೇಳಿದ ಕಾರಣಗಳಿಗಾಗಿ ದೂರುದಾರಳೊಂದಿಗೆ ಜಗಳವಾಡಿದನು ಮತ್ತು ಮಧ್ಯಾಹ್ನ 3.00 ಗಂಟೆ ಸುಮಾರಿಗೆ, ದೂರುದಾರಳು ಮತ್ತು ಅವಳ ಮಕ್ಕಳಿಂದ ಅವನಿಗೆ ಸಮಸ್ಯೆಯಾಗಿದೆಯೆಂದು ಅವಳ ಮಕ್ಕಳು ತನಗೆ ಹುಟ್ಟಿಲ್ಲವೆಂದು ಅವರನ್ನು ಸಾಯಿಸುತ್ತೇನೆಂದು ಹೇಳಿ ಮನೆಯಲ್ಲಿದ್ದ ವಿಷವಿರುವ ಬಾಟಲಿಯನ್ನು ತೆಗೆದುಕೊಂಡು ಹೋದನು. ಮತ್ತು ದೂರುದಾರಳು ತಡೆದರೂ, ಅವಳನ್ನು ಪಕ್ಕಕ್ಕೆ ತಳ್ಳಿ ಮೂರು ವರ್ಷದ ಚಂದ್ರಿಕಾ ಮತ್ತು ಒಂದುವರೆ ವರ್ಷದ ಅಕ್ಷತಾಳಿಗೆ ಬಲವಂತವಾಗಿ ವಿಷವನ್ನು ಕುಡಿಸಿದನು. ಆ ಘಟನೆಯ ತರುವಾಯ, ಆತನು ಆ ಬಾಟಲಿಯನ್ನು ಎಸೆದು ಓಡಿಹೋದನು ತದನಂತರ, ಆಪಾದಿತನು ವಿಷ ಕುಡಿಸಿದ್ದ ಮಕ್ಕಳನ್ನು ಹಿರೇಕೆರೂರಿನ ಆಸ್ಪತ್ರೆಗೆ ಕರೆದೊಯ್ಯಲಾಯಿತು ಮತ್ತು ಹಿರೇಕೆರೂರಿನ ಆಸ್ಪತ್ರೆಯಿಂದ ದಾವಣಗೆರೆ ಆಸ್ಪತ್ರೆಗೆ ಅವರನ್ನು ಸಾಗಿಸುವಾಗ ದಿನಾಂಕ: 16.03.2012 ರ ರಾತ್ರಿ 9.00 ಗಂಟೆಯ ಸುಮಾರಿಗೆ ಚಂದ್ರಿಕಾ ಮೃತಳಾದಳು ಮತ್ತು ದಿನಾಂಕ: 19.03.2012 ರ ಸಂಜೆ 5.30 ಗಂಟೆಯ ಸುಮಾರಿಗೆ ದಾವಣಗೆರೆಯ ಬಾಪೂಜಿ ಆಸ್ಪತ್ರೆಯಲ್ಲಿ ವಿಷಸೇವನೆಯಿಂದ ಅಕ್ಷತಾ ಮೃತಳಾದಳು.

5. ದೂರಿನ ಆಧಾರದ ಮೇಲೆ, ಅಪರಾಧ ಸಂಖ್ಯೆ 42/2012 ರಲ್ಲಿ ಮೊಕದ್ದಮೆಯನ್ನು ದಾಖಲಿಸಲಾಯಿತು. ತದನಂತರದ ತನಿಖೆಯ ನಂತರ ಆರೋಪ

ಪಟ್ಟಿಯನ್ನು ಸಲ್ಲಿಸಲಾಯಿತು. ಮಾನ್ಯ ಜೆ.ಎಂ.ಎಫ್.ಸಿ, ಹಿರೇಕೆರೂರು ಇವರು ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಂಡು, ತರುವಾಯ, ದಂಡ ಪ್ರಕ್ರಿಯಾ ಸಂಹಿತೆಯ 207ನೇ ಪ್ರಕರಣದ ಅನುಸಾರವಾಗಿ ಸೆಷನ್ಸ್ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ಒಪ್ಪಿಸಿದರು. ಮಾನ್ಯ ಸೆಷನ್ಸ್ ನ್ಯಾಯಾಧೀಶರು ಆಪಾದಿತನ ಹಾಜರಿಯನ್ನು ಖಾತರಿಪಡಿಸಿಕೊಂಡರು ಮತ್ತು ಆರೋಪದ ಸಂಬಂಧದಲ್ಲಿ ವಿಚಾರಣೆ ನಡೆಸಿದ ತರುವಾಯ, ಆರೋಪವನ್ನು ಸಿದ್ಧಪಡಿಸಲಾಯಿತು ಮತ್ತು ಆಪಾದಿತನಿಗೆ ಅದನ್ನು ಓದಿ, ವಿವರಿಸಿದರು. ಆಪಾದಿತನು ತಾನು ತಪ್ಪಿತಸ್ಥನಲ್ಲವೆಂದು, ತನ್ನನ್ನು ವಿಚಾರಣೆಗೆ ಒಳಪಡಿಸುವಂತೆ ಕೋರಿದನು, ಅದರಂತೆ ವಿಚಾರಣೆಯನ್ನು ನಿಗದಿಪಡಿಸಲಾಯಿತು.

6. ಪ್ರಾಸಿಕ್ಯೂಷನ್ ತನ್ನ ಮೊಕದ್ದಮೆಗೆ ಪೂರಕವಾಗಿ 18 ಸಾಕ್ಷಿದಾರರನ್ನು ವಿಚಾರಣೆ ಮಾಡಿತು ಮತ್ತು ನಿಶಾನೆಗಳು ಪಿ.1 ರಿಂದ ಪಿ.30 ಮತ್ತು ಎರಡು ಮುದ್ದೆ ಮಾಲುಗಳು ಎಂದರೆ, ಎಂ.ಓ.1 ಮತ್ತು 2 ಎಂದು ಗುರುತು ಮಾಡಿಕೊಂಡಿತು. ಆಪಾದಿತನು ಯಾವುದೇ ಸಾಕ್ಷಿದಾರರನ್ನು ಪರೀಕ್ಷಿಸಿಲ್ಲ ಇಲ್ಲವೇ ಯಾವುದೇ ದಸ್ತಾವೇಜುಗಳನ್ನು ಗುರುತಿಸಲಿಲ್ಲ. ಅಧಿವಿಚಾರಣಾ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ಹೇಳಿಕೆಯನ್ನು ದಾಖಲಿಸಿದೆ, ಮತ್ತು ಪ್ರಾಸಿಕ್ಯೂಷನ್ ಮತ್ತು ಆಪಾದಿತನ ವಾದವನ್ನು ಆಲಿಸಿದ ತರುವಾಯ, ಭಾರತ ದಂಡ ಸಂಹಿತೆಯ 302ನೇ ಮತ್ತು 498–ಎ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಆಪಾದಿತನನ್ನು ತಪ್ಪಿತಸ್ಥನೆಂದು ಪರಿಗಣಿಸಲಾಯಿತು ಮತ್ತು ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿ ಶಿಕ್ಷೆಯನ್ನು ವಿಧಿಸಲಾಯಿತು. ಅಪರಾಧ ನಿರ್ಣಯದ ಮತ್ತು ದಂಡನೆಯ ಸದರಿ ತೀರ್ಪಿನಿಂದ ಬಾಧಿತನಾದ ಆಪಾದಿತನು, ಈ ಅಪೀಲನ್ನು ಹೂಡಿದ್ದಾನೆ.

7. ಪ್ರಾಸಿಕ್ಯೂಷನ್, ಪಿಡಬ್ಲ್ಯು–1 ಎಂದು ದೂರುದಾರಳನ್ನು ವಿಚಾರಣೆ ಮಾಡಿತು. ಪ್ರಾಸಿಕ್ಯೂಷನ್ ವಾದದ ಪ್ರಕಾರ, ಆಕೆ ಪ್ರತ್ಯಕ್ಷ ಸಾಕ್ಷಿಯಾಗಿರುತ್ತಾಳೆ. ಆದಾಗ್ಯೂ, ಆಕೆಯು, ಭಾಗಶಃವಾಗಿ ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾಳೆ. ಆಕೆಯ

ಮುಖ್ಯ ವಿಚಾರಣೆಯಲ್ಲಿ ಆಕೆ ಮತ್ತು ಅವಳ ಪತಿಯು ಒಟ್ಟಿಗೆ ವಾಸಿಸುತ್ತಿದ್ದರೆಂದು ಮತ್ತು ಅವಳ ಪತಿ ಆಕೆಯೊಂದಿಗೆ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾನೆಂದು, ದಿನಾಂಕ: 16.03.2012 ರಂದು, ಇಬ್ಬರೂ ಕೆಲಸಕ್ಕೆ ಹೋಗಿದ್ದಾಗ, ಯಾರೋ ಒಬ್ಬರು ಆಕೆಯ ಮಕ್ಕಳಿಗೆ ವಿಷವನ್ನು ಕುಡಿಸಿದ್ದರು ಎಂದು, ತದನಂತರ, ಯಾರೋ ಒಬ್ಬರು ಮಕ್ಕಳನ್ನು ಆಸ್ಪತ್ರೆಗೆ ಕೊಂಡೊಯ್ದಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ದಾರಿಯಲ್ಲಿ ರಾತ್ರಿ ಸುಮಾರು 1.00 ಗಂಟೆಗೆ ಚಂದ್ರಿಕಾ ಮೃತಳಾದಳು. ಎರಡು ದಿನಗಳ ತರುವಾಯ ಅಕ್ಷತಾ ಮೃತಳಾದಳು ಎಂದು ಆಕೆಯು ಹೇಳಿಕೆ ನೀಡಿದ್ದಾಳೆ. ದಿನಾಂಕ: 17.03.2012 ರಂದು, ಪೊಲೀಸರು ಬಂದು ದಸ್ತಾವೇಜುಗಳ ಮೇಲೆ ಸಹಿ ಹಾಕುವಂತೆ ಆಕೆಯನ್ನು ಕೇಳಿದಾಗ ಆಕೆಯು ಅದಕ್ಕೆ ಸಹಿ ಹಾಕಿದಳು. ಆಕೆಯು, ನಿಶಾನೆ ಪಿ.1 ಎಂದು ದಸ್ತಾವೇಜುಗಳನ್ನು ಮತ್ತು ನಿಶಾನೆ ಪಿ.1(ಎ) ಎಂದು ಅದರ ಮೇಲಿನ ತನ್ನ ಸಹಿಯನ್ನು ಗುರುತಿಸಿದ್ದಾಳೆ. ಆಕೆಯು, ಚಂದ್ರಿಕಾಳ ಮೃತ ದೇಹದ ಫೋಟೋವನ್ನು ನಿಶಾನೆ ಪಿ.2 ಎಂದು ಸಹ ಗುರುತಿಸಿದ್ದಾಳೆ ಮತ್ತು ಸದರಿ ಫೋಟೋದಲ್ಲಿ ಪೊಲೀಸ್, ಆಕೆಯ ತಮ್ಮ ಮತ್ತು ಆಕೆಯ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಇದ್ದಾರೆಂದು ಹೇಳಿಕೆ ನೀಡಿದ್ದಾಳೆ. ಆಕೆಯು, ಅಕ್ಷತಾಳ ಮೃತ ದೇಹದ ಫೋಟೋವನ್ನು ನಿಶಾನೆ ಪಿ.3 ಎಂದು ಸಹ ಗುರುತಿಸಿದ್ದಾಳೆ. ಆಕೆಯ ಸದರಿ ಫೋಟೋದಲ್ಲಿ, ಆಕೆ, ಅವಳ ತಮ್ಮ ಮತ್ತು ಆಕೆಯ ಚಿಕ್ಕಪ್ಪ ಇದ್ದಾರೆ ಎಂದು ಆಕೆಯು ಹೇಳಿಕೆ ಕೊಟ್ಟಿದ್ದಾಳೆ. ಆಕೆಯು, ಮತ್ತೊಂದು ಫೋಟೋವನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ.4 ಎಂದು ಗುರುತುಮಾಡಲಾಗಿದೆ ಮತ್ತು ಅದು ತನ್ನ ಪತಿಯ ಮನೆಯ ಫೋಟೋ ಎಂದು ಹೇಳಿಕೆ ನೀಡಿದ್ದಾಳೆ. ಮತ್ತು ಆಕೆಯು, ಆ ಸ್ಥಳವನ್ನು ತೋರಿಸಿದ್ದಾಳೆ. ಮುಂದುವರೆಸುತ್ತಾ, ಆಕೆಯು ತನ್ನ ಮಕ್ಕಳು ಮೃತರಾದಾಗಿನಿಂದ ತನ್ನ ಹೆತ್ತವರ ಜೊತೆ ವಾಸವಾಗಿದ್ದೇನೆಂದು ಹೇಳಿಕೆ ಕೊಟ್ಟಿದ್ದಾಳೆ. ತನ್ನ ಮಕ್ಕಳನ್ನು ಕೊಲೆ ಮಾಡಿದ ಕಾರಣ ತನ್ನ ಪತಿಯು ಕಾರಾಗೃಹದಲ್ಲಿದ್ದಾನೆಂದು ಸಹ ಆಕೆಯು ಹೇಳಿಕೆ ನೀಡಿದ್ದಾಳೆ. ಪ್ರಾಸಿಕ್ಯೂಷನ್ ಪ್ರತಿಕೂಲ ಸಾಕ್ಷಿ ಎಂದು ಆಕೆಯನ್ನು ಪರಿಗಣಿಸಿದ ತರುವಾಯ, ಆಕೆಯನ್ನು ಪಾಟೀ–ಸವಾಲಿಗೆ ಒಳಪಡಿಸಿದೆ. ಪಾಟೀ–ಸವಾಲಿನಲ್ಲಿ, ಆಕೆಯು ತನ್ನ ಪತಿಯ ವಿರುದ್ಧ ದೂರು ಕೊಡಲು ನಿರಾಕರಿಸಿದ್ದಾಳೆ. ಆಕೆಯು, ತನ್ನ ಪತಿಯು ತನಗೆ

ಚಿತ್ರಹಿಂಸೆ ಕೊಡುತ್ತಿದ್ದನೆಂಬುದನ್ನು, ತನ್ನ ನಡತೆಯನ್ನು ಅನುಮಾನಿಸುತ್ತಿದ್ದನೆಂದು, ಮಕ್ಕಳು ತನ್ನವಲ್ಲವೆಂದು ಹೇಳಿ ಮಕ್ಕಳಿಗೆ ವಿಷ ಕುಡಿಸಿದನೆಂಬ ಬಗೆಗಿನ ಆರೋಪವನ್ನು ನಿರಾಕರಿಸಿದ್ದಾಳೆ. ಆದಾಗ್ಯೂ, ಅವಳ ಮಕ್ಕಳು ವಿಷ ಸೇವನೆಯಿಂದ ಮೃತರಾಗಿದ್ದಾರೆಂಬ ಪ್ರಾಸಿಕ್ಯೂಷನ್ ಸೂಚನೆಯನ್ನು ಒಪ್ಪಿಕೊಂಡಿದ್ದಾಳೆ. ಅಲ್ಲದೆ, ಆಕೆಯು, ಪೊಲೀಸರು ಆಸ್ಪತ್ರೆಗೆ ಬಂದಾಗ ತಾನು, ಆಸ್ಪತ್ರೆಯಲ್ಲಿ ನಡೆದ ಘಟನೆಯ ಕುರಿತು ಅವರಿಗೆ ತಿಳಿಸಿದೆನೆಂದು, ಅವರು ಅದನ್ನು ಬರೆದುಕೊಂಡು ಅದನ್ನು ತನಗೆ ಓದಿ ತಿಳಿಸಿದ್ದಾರೆಂದು ಒಪ್ಪಿಕೊಂಡಿದ್ದಾಳೆ. ಅಲ್ಲದೆ, ಆ ಹೇಳಿಕೆಗೆ, ತಾನು ಸಹಿ ಹಾಕಿರುವುದು ಸಹ ಒಪ್ಪಿಕೊಂಡಿದ್ದಾಳೆ. ಆಕೆಯು ಏನು ಹೇಳಿಕೆ ಕೊಟ್ಟಿದ್ದಳೋ ಅದನ್ನು ಪೊಲೀಸರು ಬರೆದುಕೊಂಡಿರುವುದನ್ನು ಸಹ ಆಕೆಯು ಒಪ್ಪಿಕೊಂಡಿದ್ದಾಳೆ. ತನ್ನ ಮಕ್ಕಳಿಗೆ ಎಲ್ಲಿ ವಿಷ ಕುಡಿಸಲಾಯಿತು, ವಿಷದ ಬಾಟಲಿಯನ್ನು ಎಲ್ಲಿ ಎಸೆಯಲಾಯಿತು ಎಂಬ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದನ್ನು ಮತ್ತು ಬಾಟಲಿಯನ್ನು ಎಸೆದ ಸ್ಥಳದಲ್ಲಿ ಬಾಟಲಿಯನ್ನು ಹುಡುಕಿದಾಗ ಅದು ಕಾಣಲಿಲ್ಲ ಎಂಬ ಬಗ್ಗೆಯೂ ಸಹ ಆಕೆಯು ಒಪ್ಪಿಕೊಂಡಿದ್ದಾಳೆ. ಮುಂದುವರೆಸುತ್ತಾ, ವಿಷ ಕುಡಿದ ಕಾರಣ ತನ್ನ ಮಕ್ಕಳು ವಾಂತಿ ಮಾಡಿಕೊಂಡಾಗ, ಅದು ಅವರ ಬಟ್ಟೆಯ ಮೇಲೆಲ್ಲಾ ಬಿದ್ದಿದ್ದನ್ನು ಆಕೆಯು ಒಪ್ಪಿಕೊಂಡಿದ್ದಾಳೆ. ಆಕೆಯು ಅಕ್ಷತಾಳ ಒಂದು ಬಟ್ಟೆಯನ್ನು ಎಂ.ಓ.1 ಎಂದು ಮತ್ತು ಚಂದ್ರಿಕಾಳ ಫ್ರಾಕ್ ಅನ್ನು ಎಂ.ಓ.2 ಎಂದು ಗುರುತಿಸಿದ್ದಾಳೆ. ಆಕೆಯು, ತನ್ನ ಸಮ್ಮುಖದಲ್ಲಿ ಪಂಚನಾಮೆ ಮಾಡಲಾದ ಬಗ್ಗೆ ಒಪ್ಪಿಕೊಂಡಿದ್ದಾಳೆ ಮತ್ತು ಪಂಚನಾಮವನ್ನು ನಿಶಾನೆ ಪಿ.5 ಎಂದು ಮತ್ತು ಪಂಚನಾಮದ ಮೇಲೆ ಆಕೆಯ ಸಹಿಯನ್ನು ನಿಶಾನೆ ಪಿ.5(ಎ) ಎಂದು ಗುರುತು ಮಾಡಲಾದುದನ್ನು ಒಪ್ಪಿಕೊಂಡಿದ್ದಾಳೆ. ಆಕೆಯು, ಇನ್ನುಮುಂದೆ ತಾನು ಮತ್ತು ತನ್ನ ಪತಿ ಪರಸ್ಪರ ಸಂತೋಷದಿಂದ ಜೀವಿಸಲು ನಿರ್ಧರಿಸಿದ್ದೇವೆ ಎಂದು ಹೇಳಿಕೆ ನೀಡಿದ್ದಾಳೆ. ತನ್ನ ಹೆತ್ತವರು ಅವರೊಂದಿಗೆ ಆಕೆಯನ್ನು ಬಿಡಲು ಸಿದ್ಧರಿಲ್ಲವೆಂದು ಮತ್ತು ಆದರೆ ಆಕೆಗೆ ತನ್ನ ಪತಿಯೊಂದಿಗೆ ಜೀವಿಸುವುದರ ಹೊರತು ಬೇರೆ ದಾರಿಯಿಲ್ಲ ಎಂದು ಆಕೆಯು ಹೇಳಿಕೆ ನೀಡಿದ್ದಾಳೆ.

8. ಪಿಡಬ್ಲ್ಯ–2 ಇವನು, ಆಪಾದಿತನಿಗೆ ಮತ್ತು ದೂರುದಾರಳಾದ ಪಿಡಬ್ಲ್ಯ.1ಗೆ ಪರಿಚಿತ ವ್ಯಕ್ತಿಯಾಗಿರುತ್ತಾನೆ ಮತ್ತು ಪಂಚ ಸಾಕ್ಷಿಯಾಗಿರುತ್ತಾನೆ. ಆತನು, ನಿಶಾನೆ ಪಿ.5 ಪಂಚನಾಮದ ಮೇಲೆ ಹಾಕಿರುವುದು ತನ್ನ ಸಹಿಯೇ ಎಂದು ಒಪ್ಪಿಕೊಂಡಿರುತ್ತಾನೆ. ಆತನು, ಪಂಚನಾಮದ ಒಳಾಂಶಗಳಿಗೆ ಸಂಬಂಧಿಸಿದಂತೆ ಅದರಲ್ಲೇನಿತ್ತು ಎಂಬುದು ತನಗೆ ತಿಳಿದಿದೆ ಎಂಬುದನ್ನು ನಿರಾಕರಿಸುತ್ತಾನೆ. ಪ್ರಾಸಿಕ್ಯೂಷನ್ ಆತನನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿದೆ. ಪಾಟೀ–ಸವಾಲಿನಲ್ಲಿ, ಮಕ್ಕಳಿಗೆ ಎಲ್ಲಿ ವಿಷ ಕುಡಿಸಲಾಯಿತು ಎಂದು ಪೊಲೀಸರಿಗೆ ಆ ಸ್ಥಳವನ್ನು ಪಿಡಬ್ಲ್ಯ.1 ತೋರಿಸಿರುವುದನ್ನು ಆತನು ಒಪ್ಪಿಕೊಂಡಿದ್ದಾನೆ. ವಿಷದ ಬಾಟಲಿಯನ್ನು ಪೊಲೀಸರು ಹುಡುಕುತ್ತಿದ್ದರೂ, ಅವರಿಗೆ ಸಿಗಲಿಲ್ಲವೆಂದು ಆತನು ಹೇಳಿಕೆ ನೀಡಿದ್ದಾನೆ.

9. ಪಿಡಬ್ಲ್ಯ.3 ಸಹ ಪಂಚ ಸಾಕ್ಷಿಯಾಗಿರುತ್ತಾನೆ. ಆತನು ನಿಶಾನೆ ಪಿ.5 ರಲ್ಲಿ ಸ್ಥಳ ಪಂಚನಾಮವನ್ನು ಗುರುತಿಸಿದ್ದಾನೆ. ಆತನು ಮುದ್ದೆಮಾಲುಗಳ ಮೇಲೆ ತನ್ನ ಸಹಿಯನ್ನು ಹಾಕಿದ್ದೇನೆ ಎಂದು ಹೇಳಿಕೆ ನೀಡಿದ್ದಾನೆ. ಆತನು, ನಿಶಾನೆ ಪಿ.5 ರಲ್ಲಿ ಏನಿತ್ತು ಎಂಬ ಬಗೆಗಿನ ತನ್ನ ತಿಳುವಳಿಕೆಯನ್ನು ನಿರಾಕರಿಸಿದ್ದಾನೆ. ಆತನು ನಿಶಾನೆ ಪಿ.9 ಎಂದು ಗುರುತು ಮಾಡಲಾದ ಮಹಜರ್ ಮೇಲಿನ ಶೋಧನೆಯನ್ನು ಒಪ್ಪಿಕೊಂಡಿದ್ದಾನೆ. ಪ್ರಾಸಿಕ್ಯೂಷನ್ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿದೆ. ಪಾಟೀ–ಸವಾಲಿನಲ್ಲಿ, ಆತನು ಯಾವುದೇ ಸೃಷ್ಟಿಸಲಾದ ದಸ್ತಾವೇಜುಗಳ ಮೇಲೆ ತಾನು ಸಹಿ ಮಾಡಿಲ್ಲವೆಂದು ಹೇಳಿಕೆ ನೀಡಿದ್ದಾನೆ.

10. ಪಿಡಬ್ಲ್ಯ.4, ದೂರುದಾರಳ ಮತ್ತು ಆಪಾದಿತನ ಕುಟುಂಬಕ್ಕೆ ಪರಿಚಿತಳಾದ ವ್ಯಕ್ತಿಯಾಗಿರುತ್ತಾಳೆ. ಆಕೆಯು ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾಳೆ ಮತ್ತು ಆಕೆಯ ಸಾಕ್ಷ್ಯವು, ಪ್ರಾಸಿಕ್ಯೂಷನ್ನಿಗೆ ಯಾವುದೇ ಪ್ರಯೋಜನವಾಗಿಲ್ಲ.

11. ಪಿಡಬ್ಲ್ಯ.5 ದೂರುದಾರಳ ತಾಯಿಯಾಗಿರುತ್ತಾಳೆ ಮತ್ತು ಆಕೆಯೂ ಸಹ ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾಳೆ. ಆದಾಗ್ಯೂ, ಪ್ರಾಸಿಕ್ಯೂಷನ್ನಿನ

ಪಾಟೀ–ಸವಾಲಿನಲ್ಲಿ, ತನ್ನ ಪತಿ, ಆ ದುರದೃಷ್ಟದ ದಿನದಂದು ಮಧ್ಯಾಹ್ನ ಸರಿಸುಮಾರು 3.30 ಗಂಟೆ ವೇಳೆಗೆ ತನ್ನ ಮಗಳ ಮನೆಯಿಂದ ಕರೆಮಾಡಿ ಆಪಾದಿತನು ಮಕ್ಕಳಿಗೆ ವಿಷಕುಡಿಸಿದ್ದಾನೆಂದು ಅವರು ಆಸ್ಪತ್ರೆಗೆ ಹೋಗುತ್ತಿದ್ದಾರೆಂದು ಹೇಳಿ ಪಿಡಬ್ಲ್ಯು.5 ಕ್ಕೂ ಅಲ್ಲಿಗೆ ಬರುವಂತೆ ಹೇಳಿದನೆಂದು ಒಪ್ಪಿಕೊಂಡಿದ್ದಾಳೆ. ಮುಂದುವರೆಸುತ್ತಾ, ಆಕೆಯು ಘಟನೆಯ ಕುರಿತಾಗಿ ತನ್ನ ಮಗಳನ್ನು ವಿಚಾರಿಸಿದಾಗ, ಮಗಳು, ತನ್ನ ಪತಿ ಕೆಲಸ ಮುಗಿಸಿಕೊಂಡು ಮನೆಗೆ ಬಂದ ಮೇಲೆ ಮಕ್ಕಳಿಗೆ ವಿಷ ಕುಡಿಸಿ ಮನೆಯ ಹಿಂದಿನ ಬಾಗಿಲಿನಿಂದ ಓಡಿ ಹೋದನೆಂದು ಹೇಳಿದಳೆಂದು ಒಪ್ಪಿಕೊಂಡಿದ್ದಾಳೆ. ಅಲ್ಲದೆ, ತನ್ನ ಅಳಿಯ ತನ್ನ ಮಗಳ ನಡತೆಯನ್ನು ಅನುಮಾನಿಸುತ್ತಿದ್ದನೆಂದು, ಅಳಿಯನು ಮಗಳ ಮೇಲೆ ಹಲ್ಲೆ ಮಾಡುತ್ತಿದ್ದನೆಂದು ಮತ್ತು ಆಪಾದಿತನು ಮಕ್ಕಳು ತನಗೆ ಹುಟ್ಟಿಲ್ಲವೆಂದು ಹೇಳುತ್ತಿದ್ದನೆಂದು ಹೇಳಿಕೆ ನೀಡಿದ್ದಾಳೆ. ಮುಂದುವರೆಸುತ್ತಾ, ಆ ಕಾರಣಕ್ಕಾಗಿಯೇ ಆಪಾದಿತನು ಮಕ್ಕಳಿಗೆ ವಿಷ ಕುಡಿಸಿದನೆಂದು ತನ್ನ ಮಗಳು ತನಗೆ ತಿಳಿಸಿದಳೆಂದು ಹೇಳಿಕೆ ನೀಡಿದ್ದಾಳೆ. ಆಕೆಯು, ಆ ಕಾರಣಕ್ಕಾಗಿಯೇ ಮಕ್ಕಳು ಸಾವನ್ನಪ್ಪಿದ್ದಾರೆಂದು ಒಪ್ಪಿಕೊಂಡಿದ್ದಾಳೆ.

12. ಪಿಡಬ್ಲ್ಯು.6 ಆಪಾದಿತನಿಗೆ ಮತ್ತು ದೂರುದಾರಳಿಗೆ ಪರಿಚಿತನಾದ ವ್ಯಕ್ತಿಯಿದ್ದಾನೆ, ಆತನು ಸಹ ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾನೆ. ಆತನು, ಆಪಾದಿತನು ಮತ್ತು ದೂರುದಾರಳು ತಮ್ಮ ಮಕ್ಕಳ ಜೊತೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರೆಂದು, ಆಪಾದಿತನು, ಟ್ರಾಕ್ಟರ್ ಅನ್ನು ಚಾಲನೆ ಮಾಡುತ್ತಿದ್ದನೆಂದು ಮತ್ತು ದೂರುದಾರಳು ಚಿಕ್ಕ ಮಕ್ಕಳೊಂದಿಗೆ ಮನೆಯಲ್ಲಿಯೇ ಇರುತ್ತಿದ್ದಳೆಂದು ಆತನು ಒಪ್ಪಿಕೊಂಡಿದ್ದಾನೆ. ದೂರುದಾರಳನ್ನು ಬಿಟ್ಟು ಮಕ್ಕಳನ್ನು ಯಾರೊಬ್ಬರೂ ಸಹ ನೋಡಿಕೊಳ್ಳುತ್ತಿರಲಿಲ್ಲವೆಂದು ಆತನು ಒಪ್ಪಿಕೊಂಡಿದ್ದಾನೆ. ದೂರುದಾರಳು ಆಪಾದಿತನ ವಿರುದ್ಧ ದೂರನ್ನು ನೀಡಿದ್ದರಿಂದ, ಆಪಾದಿತನು ಕಾರಾಗೃಹದಲ್ಲಿದ್ದಾನೆಂದು ಹೇಳಿಕೆ ನೀಡಿದ್ದಾನೆ. ಆಪಾದಿತನು ಮೊಕದ್ದಮೆಯನ್ನು ರಾಜಿ ಮಾಡಿಕೊಳ್ಳಲು ಕೇಳಿದ್ದಾನೆಂದು ಆತನು ಒಪ್ಪಿಕೊಂಡಿದ್ದಾನೆ.

13. ಪಿ.ಡಬ್ಲ್ಯೂ.7 ಆಪಾದಿತನಿಗೆ ಪರಿಚಯವಿರುವ ಮತ್ತೊಬ್ಬ ವ್ಯಕ್ತಿ. ಆತನು, ಆಪಾದಿತನು ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಮಾತ್ರ ಮನೆಯಲ್ಲಿ ವಾಸಿಸುತ್ತಿದ್ದರೆಂದು ಹೇಳಿಕೆ ನೀಡಿದ್ದಾನೆ. ಆತನು ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾನೆ.

14. ಪಿ.ಡಬ್ಲ್ಯೂ.8 ದೂರುದಾರಳ ಚಿಕ್ಕಪ್ಪನಾಗಿದ್ದಾನೆ. ಆತನು ಸಹ ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾನೆ.

15. ಪಿ.ಡಬ್ಲ್ಯೂ.9 ದೂರುದಾರಳ ತಂದೆಯಾಗಿದ್ದಾನೆ. ಆತನು ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾನೆ.

16. ಪಿ.ಡಬ್ಲ್ಯೂ.10 ದೂರುದಾರಳಿಗೆ ಮತ್ತು ಆಪಾದಿತನಿಗೆ ಇಬ್ಬರಿಗೂ ಪರಿಚಿತ ವ್ಯಕ್ತಿಯಾಗಿದ್ದಾನೆ. ಆತನು ಸಹ ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾನೆ.

17. ಪಿ.ಡಬ್ಲ್ಯೂ.11 ದೂರುದಾರಳ ತಮ್ಮ. ಆತನು ತಾನು ದೂರನ್ನು ಬರೆದು ತನ್ನ ಅಕ್ಕನಾದ ದೂರುದಾರಳ ಸೂಚನೆಗಳ ಮೇರೆಗೆ ಪೋಲೀಸರಿಗೆ ದೂರನ್ನು ಕೊಟ್ಟಿರುತ್ತೇನೆಂದು ಹೇಳಿಕೆ ನೀಡಿದ್ದಾನೆ. ಆತನು ದೂರಿನಲ್ಲಿರುವುದು ತನ್ನ ಸಹಿಯೇ ಎಂದು ಒಪ್ಪಿಕೊಂಡಿರುತ್ತಾನೆ. ತದನಂತರ, ಆತನು ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾನೆ. ಆತನು ಪಾಟೀ–ಸವಾಲಿನಲ್ಲಿ, ತನ್ನ ಹಿರಿಯರ ಸೂಚನೆ ಮೇರೆಗೆ ತನ್ನ ಅಕ್ಕ ನ್ಯಾಯಾಲಯದ ಮುಂದೆ ಹೇಳಿಕೆ ನೀಡಿದ್ದಳೆಂದು ಹೇಳಿಕೆ ನೀಡಿದ್ದಾನೆ.

18. ಪಿ.ಡಬ್ಲ್ಯೂ.12 ಪೊಲೀಸು ಕಾನ್‌ಸ್ಟೇಬಲ್. ಆತನು, ತಾನು ದಿನಾಂಕ: 17.03.2012 ರಂದು ದಾವಣಗೆರೆಯ ಸಿ.ಜೆ. ಆಸ್ಪತ್ರೆ ಹೋಗಿ ದೂರುದಾರಳನ್ನು ಸಬ್–ಇನ್ಸ್‌ಪೆಕ್ಟರ್ ಬಳಿಯಿಂದ ಕರೆದುಕೊಂಡು ಬಂದು ದೂರನ್ನು ಠಾಣಾಧಿಕಾರಿಗೆ ಕೊಟ್ಟೆನೆಂದು ಹೇಳಿಕೆ ನೀಡಿದ್ದಾರೆ.

19. ಪಿಡಬ್ಲ್ಯು.13 ಸಬ್–ಇನ್ಸ್‌ಪೆಕ್ಟರ್. ಅವರು ದೂರುದಾರಳಿಂದ ದೂರನ್ನು ಸ್ವೀಕರಿಸಿದೆನೆಂದು, ದೂರಿನಲ್ಲಿರುವ ಸಹಿಯನ್ನು ತಾನು ಗುರುತಿಸಿದೆನಂದು ಅವರು ಹೇಳಿಕೆ ನೀಡಿದ್ದಾರೆ. ಮುಂದುವರೆಸುತ್ತಾ, ತಾನು, ಪೋಲೀಸು ಠಾಣೆಯಲ್ಲಿ ದೂರನ್ನು ದಾಖಲಿಸುವ ಸಲುವಾಗಿ ಅದನ್ನು ಪಿಡಬ್ಲ್ಯು.12 ನೀಡಿದನೆಂದು ಹೇಳಿಕೆ ನೀಡಿದ್ದಾರೆ. ಅವರು ಮೃತ ಚಂದ್ರಿಕಾಳ ಶವಮಹಜರು ಪಂಚನಾಮವನ್ನು ಬರೆದೆನೆಂದು ಮತ್ತು ಚಂದ್ರಿಕಾಳ ಬಟ್ಟೆಗಳನ್ನು ಪಂಚನಾಮ ಮಾಡಿ ಅದನ್ನು ಸ್ವಾಧೀನಪಡಿಸಿಕೊಂಡನೆಂದು ಹೇಳಿಕೆ ನೀಡಿದ್ದಾರೆ ಹಾಗೆಯೇ ದಿನಾಂಕ: 20.03.2012 ರಂದು ಮೃತ ಅಕ್ಷತಾಳ ಶವಮಹಜರು ಪಂಚನಾಮವನ್ನು ಬರೆದುಕೊಂಡು, ಮೃತಳ ಶರೀರದ ಮರಣೋತ್ತರ ಪರೀಕ್ಷೆಯನ್ನು ಮಾಡುವಂತೆ ಸಂಬಂಧಪಟ್ಟ ವೈದ್ಯರ ಬಳಿ ಸಹ ಮನವಿ ಮಾಡಿಕೊಂಡುದಾಗಿ ಹೇಳಿಕೆ ನೀಡಿದ್ದಾರೆ.

20. ಪಿಡಬ್ಲ್ಯು.14 ರವರು ಹಿರೇಕೆರೂರು ಪೋಲೀಸು ಠಾಣೆಯಲ್ಲಿ ಸಬ್–ಇನ್ಸ್‌ಪೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರು ಪಿ.ಡಬ್ಲ್ಯು–12 ರವರಿಂದ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲು ಮಾಡಿಕೊಂಡಿರುವುದಾಗಿ ಹೇಳಿಕೆ ನೀಡಿದ್ದಾರೆ. ತದನಂತರ, ಅವರು ಅಧಿಕಾರವ್ಯಾಪ್ತಿ ಹೊಂದಿರುವ ನ್ಯಾಯಾಲಯಕ್ಕೆ ದೂರನ್ನು ಮತ್ತು ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಿದ್ದುದಾಗಿ ಹೇಳಿಕೆ ನೀಡಿದ್ದಾರೆ.

21. ಪಿ.ಡಬ್ಲ್ಯು–15 ಪಿ.ಡಬ್ಲ್ಯುಡಿ ನಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಜಿನಿಯರ್ ಆಗಿದ್ದು ಅವರು ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿದ್ದಾರೆ.

22. ಪಿ.ಡಬ್ಲ್ಯು–16 ರವರು ಘಟನೆ ನಡೆದ ಸ್ಥಳದ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ತಾವರಗಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿರುತ್ತಾರೆ ಮತ್ತು ಅವರು ಅದಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದಾರೆ.

23. ಪಿ.ಡಬ್ಲ್ಯು–17 ರವರು ಬೆಳಗಾವಿಯ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಅಧಿಕಾರಿಯಾಗಿದ್ದಾರೆ. ಅವರು, ಮೃತರ ಬಟ್ಟೆಗಳು ಅಕ್ಷತಾ ಮತ್ತು ಚಂದ್ರಿಕಾರ

ಯಕೃತ್ತು, ಮೂತ್ರಪಿಂಡದ ಭಾಗಗಳನ್ನು ಮತ್ತು ರಕ್ತವನ್ನು ಪರೀಕ್ಷಿಸಿದ್ದೇನೆಂದು ಹೇಳಿಕೆ ನೀಡಿದ್ದಾರೆ ಮತ್ತು ಅವರು ಸದರಿ ಗುಣಪರೀಕ್ಷೆಗಳಲ್ಲಿ ಆರ್ಗನೋ ಫಾಸ್ಫರಸ್ ಕೀಟನಾಶಕ ವಿಷ ಕಂಡು ಬಂದಿರುವುದಾಗಿ ಮತ್ತು ಅದೆ ಕಾರಣಕ್ಕಾಗಿ ಮರಣ ಸಂಭವಿಸಿದೆ ಎಂದು ಹೇಳಿಕೆ ನೀಡಿದ್ದಾರೆ.

24. ಪಿ.ಡಬ್ಲ್ಯು–18 ಮತ್ತೊಬ್ಬ ಸಾಕ್ಷಿಯಾಗಿರುತ್ತಾನೆ. ಆತನು ಪ್ರತಿಕೂಲ ಸಾಕ್ಷಿಯಾಗಿ ತಿರುಗಿದ್ದಾನೆ.

25. ಆಪಾದಿತನ/ಅಪೀಲುದಾರನ ಪರ ಮಾನ್ಯ ವಕೀಲರು, ಅಧಿವಿಚಾರಣಾ ನ್ಯಾಯಾಲಯವು, ಆಪಾದಿತನು ಅಪರಾಧಗಳ ತಪ್ಪಿತಸ್ಥನೆಂದು ನಿರ್ಣಯಿಸಿ, ತಪ್ಪಾಗಿ ತೀರ್ಪು ನೀಡುವಲ್ಲಿ ಗಂಭೀರ ಲೋಪ ಮಾಡಿದೆಯೆಂದು ವಾದಿಸಿರುತ್ತಾರೆ. ಆಪಾದಿತನ/ಅಪೀಲುದಾರನು ಸಾಕ್ಷಿದಾರರ ಸಾಕ್ಷ್ಯದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ ಎಂದು ವಾದಿಸಿದ್ದಾನೆ. ದೂರುದಾರಳನ್ನು ಒಳಗೊಂಡು ಎಲ್ಲಾ ಮುಖ್ಯ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಗಳಾಗಿ ಬದಲಾಗಿದ್ದು ಅವರು ಸಾಕ್ಷ್ಯಗಳು ಪ್ರಾಸಿಕ್ಯೂಷನ್ನಿನ ಪ್ರಕರಣಕ್ಕೆ ಪೂರಕವಾಗಿರುವುದಿಲ್ಲ. ನಿಶಾನೆ ಪಿ.1 ರಲ್ಲಿನ ದೂರನ್ನು ಮೌಖಿಕ ಸಾಕ್ಷ್ಯದ ಮೂಲಕ ಸಮರ್ಥನೆ ಮಾಡಲಾಗಿಲ್ಲ. ಆದ್ದರಿಂದ ಅದರಲ್ಲಿರುವ ಆಪಾದನೆಗಳೆಲ್ಲವನ್ನೂ ಸಾಬೀತು ಮಾಡಲೇ ಇಲ್ಲ. ಅಧಿವಿಚಾರಣಾ ನ್ಯಾಯಾಲಯವು ದೂರುದಾರಳ ತಾಯಿಯಾಗಿರುವ ಪಿ.ಡಬ್ಲ್ಯು–5 ರ ಸಾಕ್ಷ್ಯದ ಮೇಲೆ ಅವಲಂಬಿತವಾಗಿದೆ. ಅವರು, ತನ್ನ ಪತಿ, ಆಪಾದಿತನು ಮಕ್ಕಳಿಗೆ ವಿಷ ಕುಡಿಸುವುದಾಗಿ ಹೇಳಿದ್ದನೆಂದು ಮಾತ್ರ ಹೇಳಿಕೆ ನೀಡಿರುವುದರಿಂದ, ಅವರು ವಿರೋಧಾಭಿಪ್ರಾಯ ಸಾಕ್ಷಿಯಾಗಿರುತ್ತಾರೆ ಮತ್ತು ಅಧಿವಿಚಾರಣಾ ನ್ಯಾಯಾಲಯವು, ಆಪಾದಿತನ ಅಪರಾಧ ನಿರ್ಣಯಕ್ಕೆ ಅವರ ಹೇಳಿಕೆಯ ಮೇಲೆ ಅವಲಂಬಿತವಾಗುವ ಮೂಲಕ ತಪ್ಪೆಸಗಿದೆ. ಅಂತೆಯೇ ಅಧಿವಿಚಾರಣಾ ನ್ಯಾಯಾಲಯವು, ಆಪಾದಿತನ ಅಪರಾಧವನ್ನು ನಿರ್ಣಯಿಸಲು ಆಪಾದಿತನು ತನ್ನ ಜೊತೆ ತುಂಬಾ ಕ್ರೂರವಾಗಿ ನಡೆದುಕೊಂಡು ಮತ್ತು ಆಪಾದಿತ/ಅಪರಾಧ ನಿರ್ಣೀತನು ತನ್ನ ಮಗಳ ಮೇಲೆ ತನ್ನ ಮೇಲೆ ಹಲ್ಲೆ ಮಾಡುತ್ತಿದ್ದನೆಂದು ತನ್ನ ಮಗಳೇ ತನಗೆ ಹೇಳಿದ್ದಾಳೆಂದು ಅವರು

ಹೇಳಿಕೆ ನೀಡಿರುವ ಪಿ.ಡಬ್ಲ್ಯು–5 ರ ವಿರೋಧಾಭಿಪ್ರಾಯ ಸಾಕ್ಷ್ಯದ ಮೇಲೆ ಅವಲಂಬಿಸುವಲ್ಲಿ ತಪ್ಪು ಮಾಡಿದೆ. ಈ ಸಾಕ್ಷ್ಯವು ಸಾಕಾಗುವುದಿಲ್ಲ. ದೂರನ್ನು ನೀಡಲು 20 ಗಂಟೆಗಳ ವಿಳಂಬವಾಗಿರುತ್ತದೆ ಮತ್ತು ಪ್ರಾಸಿಕ್ಯೂಷನ್ನಿನ ಪ್ರಕರಣಕ್ಕೆ ಇದು ಮಾರಕವಾಗಿರುತ್ತದೆ. ಈ ಕಾರಣಗಳ ಮೇಲೆ, ಆಪಾದಿತನು ತನ್ನ ಅಪೀಲನ್ನು ಪುರಸ್ಕರಿಸುವಂತೆ ಕೋರಿದ್ದಾನೆ.

26. ಆಪಾದಿತನ ಪರ ಮಾನ್ಯ ವಕೀಲರು ಮಾಡಿರುವ ವಾದಗಳನ್ನು ಪರಿಗಣಿಸುವ ಮುನ್ನ, ಮೃತ ಚಂದ್ರಿಕಾ ಮತ್ತು ಅಕ್ಷತಾ ನರಹತ್ಯೆಯ ಮರಣದ ಕಾರಣವಾಗಿ ಮೃತರಾಗಿದ್ದಾರೆಂಬ ಸಂಗತಿಯನ್ನು ಚರ್ಚಿಸುವುದು ಅಗತ್ಯ. ಅದನ್ನು ಸಾಬೀತುಪಡಿಸುವ ಸಲುವಾಗಿ, ಪ್ರಾಸಿಕ್ಯೂಷನ್ ಮೃತ ಚಂದ್ರಿಕಾ ಮತ್ತು ಅಕ್ಷತಾರ ಮರಣೋತ್ತರ ಪರೀಕ್ಷೆಯ ವರದಿಗಳನ್ನು ಅನುಕ್ರಮವಾಗಿ ನಿಶಾನೆ–12 ಮತ್ತು 13 ಎಂದು ಗುರುತುಮಾಡಿದೆ. ಮರಣೋತ್ತರ ಪರೀಕ್ಷೆಯನ್ನು ನಡೆಸಿದ ವೈದ್ಯರು, ಆರ್ಗನೋ ಫಾಸ್ಫರಸ್ (ಮಿಶ್ರಣ) ಕೀಟನಾಶಕವನ್ನು ಸೇವಿಸಿದ ಪರಿಣಾಮವಾಗಿ ಹೃದಯ ರಕ್ತನಾಳದ ವೈಫಲ್ಯದಿಂದ ಸಾವು ಸಂಭವಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಎಫ್‌ಎಸ್‌ಎಲ್ ವರದಿಯಲ್ಲಿಯೂ ಸಮರ್ಥಿಸಲಾಗಿದೆ. ಇದನ್ನು ನಿಶಾನೆ–28 ರಲ್ಲಿ ಗುರುತು ಮಾಡಲಾಗಿರುತ್ತದೆ. ದೂರುದಾರಳಾದ, ಪಿ.ಡಬ್ಲ್ಯು–1 ದೂರುದಾರಳ ತಾಯಿಯಾದ ಪಿ.ಡಬ್ಲ್ಯು–5 ಮತ್ತು ಇತರ ಸಾಕ್ಷಿದಾರರೂ ಸಹ ಮೃತರಿಬ್ಬರೂ ವಿಷ ಸೇವನೆಯಿಂದಾಗಿ ಮೃತರಾಗಿದ್ದಾರೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

27. ವಾದ ವಿವಾದಗಳ ಸಮಯದಲ್ಲೂ ಅಪೀಲುದಾರನ ಪರ ಮಾನ್ಯ ವಕೀಲರು ಇಬ್ಬರು ಮಕ್ಕಳು ವಿಷಸೇವನೆಯಿಂದಾಗಿ ನರಹತ್ಯೆ ಮರಣದಿಂದ ಮೃತರಾಗಿದ್ದಾರೆಂದು ಒಪ್ಪಿಕೊಂಡಿರುವುದರಿಂದ ಅದರ ಬಗ್ಗೆ ಯಾವುದೇ ವಿವಾದವಿಲ್ಲ. ಈ ಅಂಶಗಳ ಹಿನ್ನಲೆಯಲ್ಲಿ, ಮೃತ ಚಂದ್ರಿಕಾ ಮತ್ತು ಅಕ್ಷತಾ ನರಹತ್ಯೆ ಮರಣದಿಂದಾಗಿ ಮೃತರಾಗಿದ್ದಾರೆಂದು ನಿಖರ ಅಭಿಪ್ರಾಯಕ್ಕೆ ಬರಬಹುದು.

28. ಆಪಾದಿತನು ವಾದಿಸಿರುವಂತೆ ಮುಖ್ಯ ಸಾಕ್ಷಿದಾರರು ನೀಡಿದ ಸಾಕ್ಷ್ಯದಲ್ಲಿ ವ್ಯತ್ಯಾಸಗಳಿವೆ ಎಂಬುದು ಸತ್ಯ. ಪಿ.ಡಬ್ಲ್ಯು–1 ರಿಂದ ಪಿ.ಡಬ್ಲ್ಯು–11 ಇವರು ಪ್ರತಿಕೂಲ ಸಾಕ್ಷಿದಾರರಾಗಿ ಬದಲಾಗಿದ್ದಾರೆ. ಅವರೆಲ್ಲರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪ್ರಾಸಿಕ್ಯೂಷನ್ ಪರಿಗಣಿಸಿದ ತರುವಾಯ, ಅವರನ್ನು ಪಾಟೀ–ಸವಾಲಿಗೆ ಒಳಪಡಿಸಲಾಗಿದೆ. ಆದಾಗ್ಯೂ, ಪಿ.ಡಬ್ಲ್ಯು–1 ರ ಪಾಟೀ–ಸವಾಲಿನಲ್ಲಿ, ಆಕೆಯು, ಚಿಗ್ಗಾಟ್‌ಗೆರೆ ಆಸ್ಪತ್ರೆಯಲ್ಲಿ ಇದ್ದಾಗ, ಪೊಲೀಸರು ಬಂದು ಆಕೆಯ ವಿಚಾರಣೆ ಮಾಡಿದುದಾಗಿ, ಮುಂದುವರೆಸುತ್ತಾ, ಆ ಘಟನೆಯ ಕುರಿತು ಅವಳು ವಿವರಿಸಿದ್ದುದನ್ನು ಪೊಲೀಸರು ದಾಖಲು ಮಾಡಿಕೊಂಡು, ಅದನ್ನು ಅವಳಿಗೆ ಓದಿ ಹೇಳಿದ ತರುವಾಯ ಆಕೆ ಅದಕ್ಕೆ ಸಹಿ ಮಾಡಿದ್ದುದಾಗಿ, ಒಪ್ಪಿಕೊಂಡಿದ್ದಾಳೆ. ಆಕೆಯು ಹೇಳಿರುವಂತೆಯೇ ಆಕೆಯ ಹೇಳಿಕೆಯನ್ನು ಪೊಲೀಸರು ದಾಖಲು ಮಾಡಿಕೊಂಡಿದ್ದಾರೆ ಎಂದು ಆಕೆಯು ಒಪ್ಪಿಕೊಂಡಿದ್ದಾಳೆ. ಆಕೆಯು ಮಕ್ಕಳಿಗೆ ವಿಷ ಕುಡಿಸಿದ ಮತ್ತು ವಿಷ ಬಾಟಲಿಯನ್ನು ಎಸೆದ ಸ್ಥಳವನ್ನು ತಾನು ಪೊಲೀಸರಿಗೆ ತೋರಿಸಿದ್ದುದನ್ನು ಮತ್ತು ಆ ಬಾಟಲಿ ಅಲ್ಲಿ ಕಂಡುಬಂದಿಲ್ಲದಿರುವುದನ್ನು ಸಹ ಒಪ್ಪಿಕೊಂಡಿದ್ದಾಳೆ. ತನ್ನ ಹೆತ್ತವರು ಅವರ ಮನೆಯಲ್ಲಿ ತನ್ನನ್ನು ಇಟ್ಟುಕೊಳ್ಳಲು ಸಿದ್ಧರಿಲ್ಲ ಎಂಬುದನ್ನು ಸಹ ಹೇಳಿಕೆ ನೀಡಿದ್ದಾಳೆ. ಆಪಾದಿತ ಪತಿಯೊಂದಿಗೆ ಹೋಗುವ ಆಯ್ಕೆಯನ್ನು ಬಿಟ್ಟು ತನಗೆ ಬೇರೆ ಆಯ್ಕೆಯೇ ಇಲ್ಲ ಎಂಬುದನ್ನು ಸಹ ಸ್ವತಃ ದೂರುದಾರಳು ಒಪ್ಪಿಕೊಂಡಿದ್ದಾಳೆ. ಪ್ರಾಸಿಕ್ಯೂಷನ್‌ನ ಈ ಸಾಕ್ಷ್ಯವನ್ನು, ಅಧಿವಿಚಾರಣೆಯ ಸಮಯದಲ್ಲಿ ಆಪಾದಿತನು ಪ್ರಶ್ನಿಸಿಲ್ಲ.

29. ಪಿ.ಡಬ್ಲ್ಯು–5 ರವರು ಪಿ.ಡಬ್ಲ್ಯು–1 ರ ತಾಯಿಯಾಗಿರುತ್ತಾರೆ. ಅವರು ಪ್ರತಿಕೂಲ ಸಾಕ್ಷಿಯಾಗಿ ಬದಲಾದರೂ, ಪ್ರಾಸಿಕ್ಯೂಷನ್ನಿನ ಪಾಟೀ–ಸವಾಲಿನಲ್ಲಿ, ತಾನು ಪಿ.ಡಬ್ಲು–1ನ್ನು ವಿಚಾರಿಸಿದಾಗ, ಅವಳು, ತನ್ನ ಪತಿ ಚಾಲನಾ ಕೆಲಸವನ್ನು ಮುಗಿಸಿಕೊಂಡು ಮನೆಗೆ ವಾಪಸ್ಸು ಬಂದ ಮೇಲೆ ಮಕ್ಕಳಿಗೆ ವಿಷ ಕುಡಿಸಿದನೆಂದು ಮತ್ತು ಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತೆಂದು ಹೇಳಿದ್ದಳೆಂದು ಒಪ್ಪಿಕೊಂಡಿದ್ದಾಳೆ. ಅಲ್ಲದೆ, ಆಪಾದಿತನು ಮಕ್ಕಳಿಗೆ ವಿಷ ಕುಡಿಸಿದ ತರುವಾಯ ಮನೆಯ ಹಿಂದಿನ ಬಾಗಿಲ ಕಡೆಯಿಂದ ಓಡಿ ಹೋದನೆಂದು ತನಗೆ ಹೇಳಿದಳು

ಎಂಬುದನ್ನು ಸಹ ಒಪ್ಪಿಕೊಂಡಿದ್ದಾರೆ. ಆಪಾದಿತನು ತನ್ನ ಮಗಳ ನಡತೆಯನ್ನು ಅನುಮಾನಿಸುತ್ತಿದ್ದ ಮತ್ತು ಆ ಮಕ್ಕಳು ತನಗೆ ಹುಟ್ಟಿಲ್ಲವೆಂದು ಅವ್ಯಾಚ್ಯ ಶಬ್ದಗಳಿಂದ ಆಗಾಗ ಬೈಯ್ಯುತ್ತಿದ್ದನೆಂದು ಮತ್ತು ಆ ಮಕ್ಕಳನ್ನು ಕೊಲ್ಲಲು ಇಚ್ಛಿಸಿದ್ದನೆಂದು ತನ್ನ ಮಗಳು ಹೇಳಿದ್ದಾಳೆಂದು ಅವರು ಒಪ್ಪಿಕೊಂಡಿದ್ದಾರೆ. ಇದೇ ಕಾರಣಕ್ಕೆ ಆಪಾದಿತನು ಮಕ್ಕಳಿಗೆ ವಿಷ ಕುಡಿಸಿದನೆಂದು ಮತ್ತು ಆ ಸಮಯದಲ್ಲಿ ಮಕ್ಕಳಿಬ್ಬರು ಮೃತರಾದರೆಂದು ಆಕೆ ಒಪ್ಪಿಕೊಂಡಿದ್ದಾರೆ. ಪ್ರಾಸಿಕ್ಯೂಷನ್ನಿನ ಈ ಸಾಕ್ಷ್ಯವನ್ನು ಆಪಾದಿತನು ಪ್ರಶ್ನಿಸಿಲ್ಲ.

30. ಘಟನೆಯ ಕುರಿತಾಗಿ ಪ್ರಾಸಿಕ್ಯೂಷನ್ನಿನ ನಿರೂಪಣೆಗೆ ಪೂರಕವಾಗುವಷ್ಟರ ಮಟ್ಟಿಗೆ ಪ್ರಾಸಿಕ್ಯೂಷನ್ನು ಸಹ ಪ್ರತಿಕೂಲ ಸಾಕ್ಷಿಯ ಸಾಕ್ಷ್ಯವನ್ನು ಸಹ ಅವಲಂಬಿತವಾಗಬಹುದೆಂದು ಕಾನೂನಿನ ಸುಸ್ಥಾಪಿತ ಪ್ರಸ್ತಾವನೆಯಾಗಿದೆ. ***ಭಾಜ್ಜು –ವಿರುದ್ಧ– ಮಧ್ಯ ಪ್ರದೇಶ ರಾಜ್ಯ***[1] ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾನೂನಿನ ಈ ಪ್ರಸ್ತಾವನೆಯನ್ನು ನಿರೂಪಿಸಿದೆ. 36ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ.

> *‘‘ಘಟನೆಯ ಕುರಿತಾಗಿ ಪ್ರಾಸಿಕ್ಯೂಷನ್ನಿನ ನಿರೂಪಣೆಗೆ ಪೂರಕವಾಗುವಷ್ಟರ ಮಟ್ಟಿಗೆ ವಿಸ್ತರಿಸಲು ಪ್ರಾಸಿಕ್ಯೂಷನ್ನು ಪ್ರತಿಕೂಲ ಸಾಕ್ಷಿಯ ಸಾಕ್ಷ್ಯವನ್ನು ಸಹ ಅವಲಂಬಿತವಾಗಬಹುದೆಂದು ಸುಸ್ಥಾಪಿತ ಕಾನೂನಾಗಿದೆ. ಅಂಥ ಸಾಕ್ಷಿದಾರರ ಸಾಕ್ಷ್ಯವನ್ನು ದಾಖಲೆಗಳಿಂದ ಸ್ಪಷ್ಟಪಡಿಸಲಾಗಿದೆಯೆಂದು ಪರಿಗಣಿಸಲಾಗುವುದಿಲ್ಲ. ಇದು ಅಧಿವಿಚಾರಣೆಯಲ್ಲಿ ಅನುಮತಿಸಬಹುದಾದಂತೆ ಇರುತ್ತದೆ ಮತ್ತು ಇದನ್ನು ಇತರ ನಂಬಲರ್ಹ ಸಾಕ್ಷ್ಯವು ಸಮರ್ಥಿಸಿದರೆ, ಅಂಥ ಮೌಖಿಕ ಸಾಕ್ಷ್ಯದ ಆಧಾರದ ಮೇಲೆ ಆಪಾದಿತನ ಅಪರಾಧವನ್ನು ನಿರ್ಣಯಿಸಲು ಯಾವುದೇ ಕಾನೂನಿನ ನಿರ್ಬಂಧವಿರುವುದಿಲ್ಲ. ಸಾಕ್ಷ್ಯ ಅಧಿನಿಯಮದ 154ನೇ ಪ್ರಕರಣವು, ನ್ಯಾಯಾಲಯವು, ತನ್ನ ವಿವೇಚನಾನುಸಾರವಾಗಿ, ಸಾಕ್ಷಿಯನ್ನು ಹೇಳಲು ಕರೆಯುವ ವ್ಯಕ್ತಿಗೆ,*

1. 2012 (4) ಎಸ್‌ಸಿಸಿ 327

*ಯಾರೇ ಪ್ರತಿಕೂಲ ಪಕ್ಷಕಾರರು ಪಾಟೀ–ಸವಾಲಿನಲ್ಲಿ ಕೇಳಬಹುದಾಗಿರುವ ಯಾವುದೇ ಪ್ರಶ್ನೆಯನ್ನು ಕೇಳಲು ಅವಕಾಶ ಕಲ್ಪಿಸುತ್ತದೆ."*

31. ನಿಶಾನೆ ಪಿ–1 ದೂರಿನೊಂದಿಗೆ ಪಿಡಬ್ಲ್ಯು–1 ಮತ್ತು 5 ರ ಸಾಕ್ಷ್ಯವನ್ನು ಪರಿಶೀಲಿಸಿದ ತರುವಾಯ, ಮೇಲಿನ ನಿರ್ಣಯದಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು, ಆಪಾದಿತನು, ಮೃತರಾದ ಇಬ್ಬರು ಮಕ್ಕಳಿಗೆ ವಿಷ ಕುಡಿಸಿದ್ದಾನೆಂಬ ಸಂಗತಿಯ ಮಟ್ಟಿಗೆ ಅದನ್ನು ಪುಷ್ಟೀಕರಿಸುತ್ತದೆ. ದೂರುದಾರಳಾದ ಪಿಡಬ್ಲ್ಯು–1, ತನ್ನ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದೆ ಯಾರೋ ಒಬ್ಬರು ಮಕ್ಕಳಿಗೆ ವಿಷವನ್ನು ಕುಡಿಸಿದ್ದಾರೆಂದು ಹೇಳಿಕೆ ನೀಡಲು ಪ್ರಯತ್ನಿಸಿದ್ದರೂ, ಯಾರೋ ಒಬ್ಬರು ವಿಷವನ್ನು ಕುಡಿಸಿ ತಮ್ಮ ವಿರುದ್ಧ ದ್ವೇಷವನ್ನು ಮಾಡುತ್ತಿದ್ದರೆಂದು ದಾಖಲೆಯಲ್ಲಿ ತೋರಿಸಲು, ಯಾವ ದಾಖಲೆಯನ್ನೂ ಹಾಜರುಪಡಿಸಿಲ್ಲ. ಏಕೆಂದರೆ, ಸದರಿ ಕೃತ್ಯವನ್ನು ಯಾವುದೇ ಅಂಥ ಸಾಕ್ಷ್ಯದ ಅನುಪಸ್ಥಿತಿಯಲ್ಲಿ ಮಾಡಲಾಗಿದೆ. ಅಲ್ಲದೆ, ಪಿಡಬ್ಲ್ಯು–1 ಮತ್ತು 5 ರ ಪ್ರಶ್ನಿಸಲಾಗದ ಸಾಕ್ಷ್ಯವು ಆಪಾದಿತನು ದೂರುದಾರಳ ನಡತೆಯನ್ನು ಅನುಮಾನಿಸುತ್ತಿದ್ದರಿಂದ ಆ ಅಸಭ್ಯ ನಡತೆ ಮತ್ತು ಜಗಳವು, ಮೃತರಾದ ಇಬ್ಬರು ಮಕ್ಕಳಿಗೆ ವಿಷ ಕುಡಿಸುವಂತೆ ಮಾಡಿದೆ ಎಂಬ ಸಂಗತಿಯನ್ನು ಸ್ಪಷ್ಟವಾಗಿ ರುಜುವಾತುಪಡಿಸುತ್ತದೆ. ಅಲ್ಲದೆ, ಭಾರತ ಸಾಕ್ಷ್ಯ ಅಧಿನಿಯಮದ 106ನೇ ಪ್ರಕರಣದ ಮೇರೆಗೆ, ಯಾವುದೇ ಸಂಗತಿಯು ವಿಶೇಷವಾಗಿ ಯಾವುದೇ ವ್ಯಕ್ತಿಯ ತಿಳುವಳಿಕೆಯೊಳಗೆ ಇದ್ದಾಗ, ಆ ಸಂಗತಿಯನ್ನು ಸಾಬೀತುಪಡಿಸುವ ಹೊಣೆಗಾರಿಕೆಯು ಅವನ ಮೇಲಿರುತ್ತದೆ. ಈ ಮೊಕದ್ದಮೆಯಲ್ಲಿ, ಆಪಾದಿತನು ಮತ್ತು ಪಿಡಬ್ಲ್ಯು–1, ಮೃತರಾದ ಮಕ್ಕಳೊಂದಿಗೆ ಅವರ ಮನೆಯಲ್ಲಿ ವಾಸಿಸುತ್ತಿದ್ದರು. ಬೇರೆ ಯಾರೂ ಅವರೊಂದಿಗಿರಲಿಲ್ಲ. ಮಕ್ಕಳಿಗೆ ಹೇಗೆ ವಿಷ ಕುಡಿಸಲಾಯಿತು ಎಂಬುದಕ್ಕೆ ಸಂಬಂಧಿಸಿದಂತೆ ಅವರು ಏನನ್ನೂ ಹೇಳಿಲ್ಲ.

32. ಸದರಿ ವಿಷಯಗಳ ಸಾಕ್ಷ್ಯವು ಗುಣಾತ್ಮಕವಾಗಿರಬೇಕೇ ಹೊರತು ಪ್ರಮಾಣಾತ್ಮಕವಾಗಿಯಲ್ಲ ಎಂಬುದು ಕಾನೂನಿನ ಸುಸ್ಥಾಪಿತ ವೈಶಿಷ್ಟ್ಯವಾಗಿದೆ.

ಒಂದು ವೇಳೆ ಹಾಜರುಪಡಿಸಿರುವ ಸಾಕ್ಷ್ಯವು ಆ ಘಟನೆ ನಡೆದ ರೀತಿಯನ್ನು ಸರಿಯಾಗಿ ಮನವರಿಕೆ ಮಾಡಿಕೊಟ್ಟರೆ ಮತ್ತು ಸಾಕ್ಷ್ಯಾಧಾರದ ಮೇಲೆ ಅದರಲ್ಲಿ ಒಂದಿಷ್ಟು ಸತ್ಯವಿದ್ದರೆ, ಅದರಲ್ಲೂ ಸದರಿ ಸಾಕ್ಷ್ಯವನ್ನು ವಾಸ್ತವಿಕ ನಿರೂಪಣೆಗೆ ಪ್ರಶ್ನಿಸದಿದ್ದಾಗ ಮಾತ್ರ ಆಪಾದಿತನನ್ನು ಅಪರಾಧ ನಿರ್ಣೀತನೆಂದು ನಿರ್ಣಯಿಸಲು ನ್ಯಾಯಾಲಯದ ಮೇಲೆ ಅವಲಂಬಿಸಬಹುದು. ಸಾಕ್ಷಿದಾರರ ಸಾಕ್ಷ್ಯವು ನ್ಯಾಯಾಲಯದ ವಿಶ್ವಾಸವನ್ನು ಅನ್ಯಥಾ ಪ್ರೇರೇಪಿಸುವಾಗ, ಅದನ್ನು ತಿರಸ್ಕರಿಸಲಾಗುವುದಿಲ್ಲ. ನಿಜವಾದ ಅಪರಾಧಿಯನ್ನು ತಪ್ಪಿಸಿಕೊಳ್ಳಲು ಪಿ.ಡಬ್ಲು–1 ರ ಪತಿ ಮತ್ತು ಪಿ.ಡಬ್ಲ್ಯು–5 ರ ಅಳಿಯನನ್ನು ಏಕೆ ಬಂಧಿಸಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ಕಾರಣವಿರುವುದಿಲ್ಲ. ಆಪಾದಿತನ ಹೆಸರನ್ನು ಒಳಗೊಂಡು ಇಡೀ ಘಟನೆಯನ್ನು ವಿವರಿಸುವ ನಿಶಾನೆ ಪಿ–1 ರ ಪ್ರಕಾರ ಆಪಾದಿಸಲಾದ ಘಟನೆ ನಡೆದ ಕೂಡಲೇ ದೂರನ್ನು ದಾಖಲಿಸಿರುವುದನ್ನು ಸೂಚಿಸುತ್ತದೆ. ನಿಜವಾಗಿಯೂ ಬೇರೆ ಯಾರಾದರೂ ವ್ಯಕ್ತಿ ವಿಷವನ್ನು ಕುಡಿಸಿದ್ದರೆ, ಆತನನ್ನು ಹಾಗೆಯೇ ಬಿಡುತ್ತಿರಲಿಲ್ಲ ಮತ್ತು ಗಂಡನನ್ನು ಸುಳ್ಳಾಗಿ ಸೇರಿಸುತ್ತಿರಲಿಲ್ಲವೆಂದು ಹಾಜರುಪಡಿಸಲಾದ ದಾಖಲೆಗಳಿಂದ ತಿಳಿದುಬರುತ್ತದೆ. ಆಪಾದಿಸಲಾದ ಘಟನೆಯು ದಿನಾಂಕ: 16.03.2012 ರಂದು ನಡೆದಿದೆ ಮತ್ತು ಸಾಕ್ಷಿದಾರರ ಸಾಕ್ಷ್ಯವನ್ನು ದಿನಾಂಕ: 27.11.2013 ರಂದು ದಾಖಲು ಮಾಡಲಾಗಿದೆ ಎಂದರೆ ಒಂದು ವರ್ಷ ಎಂಟು ತಿಂಗಳುಗಳಿಗಿಂತ ಹೆಚ್ಚು ವಿಳಂಬವಾಗಿದೆ. ಆಪಾದಿತನು ವ್ಯವಹರಣೆಗಳ ಸಮಯದಲ್ಲೂ ಸಹ ರಾಜಿಮಾಡಿಕೊಳ್ಳಲು ಹೆಚ್ಚು ಪ್ರಯತ್ನಗಳನ್ನು ಮಾಡಿದ್ದಾನೆ. ಹಾಗಾಗಿ, ಆಪಾದಿತ ಘಟನೆಗೆ ಸಾಕ್ಷಿಗಳಾಗುತ್ತಾರೆಂದು ಹೇಳಲಾಗಿರುವ ಎಲ್ಲ ಸಾಕ್ಷಿದಾರರೂ ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿಲ್ಲ. ಆದಾಗ್ಯೂ, ಸದರಿ ಸಾಕ್ಷಿದಾರರನ್ನು ಪ್ರಾಸಿಕ್ಯೂಷನ್ ಪಾಟೀ–ಸವಾಲು ಮಾಡಿದಾಗ, ಅವರು ಕೆಲವು ಸಂಗತಿಯನ್ನು ಒಪ್ಪಿಕೊಂಡಿದ್ದಾರೆ ಮತ್ತು ಆ ಹಿನ್ನಲೆಯಲ್ಲಿ ನ್ಯಾಯಾಲಯದ ಮುಂದೆ ಸತ್ಯವನ್ನು ಹೊರತರಲಾಗಿದೆ. ಮತ್ತು ಅದನ್ನು ಆಪಾದಿತನೂ ಪ್ರಶ್ನಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಗಳಾಗಿ ಬದಲಾದರೂ, ಅವರ ಸಾಕ್ಷ್ಯವನ್ನು ಆ ಮಟ್ಟಿಗೆ ಮಾತ್ರ ಅವಲಂಬಿಸಬಹುದು. ಸತ್ಯವನ್ನು ನಿರ್ಧರಿಸುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ನೂರು ಅಪರಾಧಿಗಳನ್ನು ಬಿಟ್ಟರೂ ಪರವಾಗಿಲ್ಲ ಆದರೆ,

ಒಬ್ಬ ಅಮಾಯಕನನ್ನು ತಪ್ಪಾಗಿ ಶಿಕ್ಷಿಸಬಾರದು ಎಂಬುದು ಕಾನೂನಿನ ಸುಸ್ಥಾಪಿತ ನಿಯಮವಾಗಿದೆ. ಆದರೆ, ಎಲ್ಲ ಸಮಂಜಸವಾದ ಸಂದೇಹವನ್ನು ಮೀರಿ ಆಪಾದಿತನನ್ನು ತಪ್ಪಿತಸ್ಥನೆಂದು ಸಾಬೀತುಪಡಿಸಲು ಪ್ರಾಸಿಕ್ಯೂಷನ್ನಿನ ಈ ಮೊಕದ್ದಮೆಗೆ ಸಾಕ್ಷ್ಯಾಧಾರವು ಪೂರಕವಾಗಿದೆ. ಆಪಾದಿತನಿಗೆ ಪ್ರಯೋಜನವಾಗುವ ಹಾಗೆ ಅವನಿಗೆ ಯಾವುದೇ ಇತರ ಸಂಶಯದ ಲಾಭವನ್ನು ಅವನು ವ್ಯಕ್ತಪಡಿಸಿಲ್ಲ. ಈ ಹಿನ್ನಲೆಯಲ್ಲಿ ಮಾನ್ಯ ವಕೀಲರು ಮಾಡಿದ ವಾದಗಳು ಅಂಗೀಕಾರಾರ್ಹವಲ್ಲ.

33. ನಾವು, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಅವಗಾಹಿಸಿದ್ದೇನೆ. ಅಧಿವಿಚಾರಣಾ ನ್ಯಾಯಾಲಯವು ಸಾಕ್ಷ್ಯಗಳ ಆಧಾರದ ಮೇಲೆ ಆಪಾದಿತನು, ಭಾರತ ದಂಡ ಸಂಹಿತೆಯ 300 ಮತ್ತು 498ಎ ಪ್ರಕರಣಗಳ ಅಡಿಯಲ್ಲಿ ಅಪರಾಧಗಳ ತಪ್ಪಿತಸ್ಥನೆಂದು ಮತ್ತು ತದನುಸಾರವಾಗಿ ಆಪಾದಿತನಿಗೆ ಶಿಕ್ಷೆ ನೀಡಲಾಗಿದೆ ಎಂದು ಸರಿಯಾಗಿಯೇ ನಿರ್ಣಯಿಸಿದೆ. ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ಉತ್ತಮ ಕಾರಣಗಳಿರುವುದಿಲ್ಲ.

34. ಅಪೀಲಿನಲ್ಲಿ ನಮಗೆ ಯಾವುದೇ ಗುಣಾರ್ಹತೆ ಕಂಡುಬಂದಿಲ್ಲ. ಮೇಲೆ ಹೇಳಿದ ಕಾರಣಗಳಿಗಾಗಿ, ಅಪೀಲನ್ನು ಈ ಮೂಲಕ ವಜಾಗೊಳಿಸಲಾಗಿರುತ್ತದೆ. ಮೊಕದ್ದಮೆ ಸಂಖ್ಯೆ: ಎಸ್.ಸಿ.ಸಂಖ್ಯೆ.54/2012 ದಿನಾಂಕ: 2.7.2015 ರಂದು IIನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಹಾವೇರಿ (ರಾಣೆಬೆನ್ನೂರು ಇಲ್ಲಿ ಪೀಠಾಸೀನ) ಇವರು ಹೊರಡಿಸಿದ ತೀರ್ಪು ಮತ್ತು ಅಪರಾಧ ನಿರ್ಣಯ ಮತ್ತು ಶಿಕ್ಷೆಯ ಆದೇಶವನ್ನು ಈ ಮೂಲಕ ಸ್ಥಿರೀಕರಿಸಲಾಗಿದೆ.

ಆಪಾದಿತನು ಹಾಜರಿರುವಂತೆ ಖಚಿತಪಡಿಸಲು ಮತ್ತು ಶಿಕ್ಷೆಯನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ಅಪರಾಧ ನಿರ್ಣಯದ ವಾರಂಟನ್ನು ನೀಡುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ.

---